# ಹೊಸ ಫೀಚರ್‌ಗಳ 'ಆಧಾರ್'

■ ಶಶಿಕುಮಾರ್ ಸಿ.

ಸಾರ್ವಜನಿಕ ಬದುಕಿನಲ್ಲಿ ಅತ್ಯಗತ್ಯವಾಗಿರುವ 'ಆಧಾರ್'ನ ವೆಬ್‌ಸೈಟ್ ಮತ್ತು ಮೊಬೈಲ್ ಅಪ್ಲಿಕೇಷನ್ ಈಚೆಗೆ ಅಪ್‌ಡೇಟ್ ಆಗಿದ್ದು, ಹಲವು ಹೊಸ ಫೀಚರ್‌ಗಳನ್ನು ಒದಗಿಸಲಾಗಿದೆ. ಆಧಾರ್‌ನ ಅಗತ್ಯ ಹೆಚ್ಚಾದಂತೆ ಜನರ ಅನುಕೂಲಕ್ಕೆಂದು, ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರವು (ಯುಐಡಿಎಐ) ಹೊಸ ಫೀಚರ್‌ಗಳನ್ನು ಪರಿಚಯಿಸಿದ್ದು, ವೆಬ್‌ಸೈಟ್ ಮತ್ತು ಮೊಬೈಲ್ ಅಪ್ಲಿಕೇಷನ್‌ಗೆ ಸುಲಭವಾಗಿ ಲಾಗಿನ್ ಆಗಬಹುದಾಗಿದೆ.

### ಹೊಸ ಅಪ್‌ಡೇಟ್‌ನಿಂದಾಗುವ ಉಪಯೋಗ?

- ಆಧಾರ್ ಕಾರ್ಡ್ ವಿವರಗಳನ್ನು ನೀವು ಆಫ್‌ಲೈನ್ ಮೋಡ್‌ನಲ್ಲೂ ವೀಕ್ಷಿಸಬಹುದು. ಆ್ಯಪ್‌ನಲ್ಲಿ ಲಾಗಿನ್ ಆದ ವ್ಯಕ್ತಿಯ ಕುಟುಂಬದ ಐವರು ಸದಸ್ಯರ ಆಧಾರ್ ವಿವರಗಳನ್ನು ಸಂಗ್ರಹಿಸಿಡಬಹುದು.
- ವೈಯಕ್ತಿಕವಾಗಿ ಆಧಾರ್ ಕಾರ್ಡ್ ಡೌನ್‌ಲೋಡ್ ಮಾಡಿಕೊಳ್ಳಬಹುದು. ಆಧಾರ್ ನವೀಕರಿಸಬಹುದು.
- ವರ್ಚುವಲ್ ಐಡಿ ರಚಿಸಬಹುದು. ಆಧಾರ್ ಕಾರ್ಡ್‌ನ ಡಿಜಿಟಲ್ ಬಳಕೆಯನ್ನು ಆ್ಯಪ್ ಮೂಲಕ ಲಾಕ್ ಮತ್ತು ಅನ್‌ಲಾಕ್ ಮಾಡಬಹುದು. ಬಯೊಮೆಟ್ರಿಕ್ ಸಹ ಲಾಕ್ ಮಾಡಬಹುದು. ಇವುಗಳೊಂದಿಗೆ ಬ್ಯಾಂಕ್, ಆಧಾರ್ ಲಿಂಕ್ ಮುಂತಾದ ಹಲವು ಫೀಚರ್‌ಗಳು ಲಭ್ಯವಾಗಲಿವೆ.
- ಕನ್ನಡ, ಇಂಗ್ಲಿಷ್, ಹಿಂದಿ, ಅಸ್ಸಾಂ, ಬೆಂಗಾಲಿ, ಗುಜರಾತಿ, ಮಲೆಯಾಳಂ, ಮರಾಠಿ, ಒಡಿಯಾ, ಪಂಜಾಬಿ, ತಮಿಳು, ತೆಲುಗು ಹಾಗೂ ಉರ್ದು ಭಾಷೆಗಳಲ್ಲಿ ಆ್ಯಪ್ ಕಾರ್ಯನಿರ್ವಹಿಸಲಿದೆ.
- 'ಎಂಆಧಾರ್' ಖಾತೆದಾರರ ಜೊತೆಗೆ ಇತರರ ಆಧಾರ್‌ಗೆ ಸಂಬಂಧಿಸಿದ ಕೆಲಸ ಕಾರ್ಯಗಳನ್ನು ಸುಲಭವಾಗಿ ಮಾಡಿಕೊಡುವ ಮೂಲಕ ನೆರವಾಗಬಹುದು.
- ವೈಯಕ್ತಿಕ ಆಧಾರ್‌ಗೆ ನೇರ ಲಾಗಿನ್ ಆಗಬಹುದು. ಆಧಾರ್ ಮರು ಮುದ್ರಣ, ಅಡ್ರೆಸ್ ಅಪ್‌ಡೇಟ್, ಡೌನ್‌ಲೋಡ್ ಆಫ್‌ಲೈನ್ ಇಕೆವೈಸಿ, ಕ್ಯುಆರ್ ಕೋಡ್ ಪ್ರದರ್ಶನ ಮತ್ತು ಸ್ಕ್ಯಾನ್, ವೆರಿಫೈ ಆಧಾರ್, ವೆರಿಫೈ ಮೇಲ್, ಯುಇಡಿ/ಇಐಡಿ ಮರುಪಡೆಯುವಿಕೆ ಹಾಗೂ ವಿಳಾಸ ದೃಢೀಕರಣ ಪತ್ರ ಅರ್ಜಿ ಸಲ್ಲಿಕೆ ಸೇರಿದಂತೆ ಆಧಾರ್‌ಗೆ ಸಂಬಂಧಿಸಿದ ಹಲವು ಕಾರ್ಯಗಳನ್ನು ಮಾಡಬಹುದು.
- ಟೈಮ್ ಬೇಸ್ಡ್ ಒನ್ ಟೈಮ್ ಪಾಸ್‌ವರ್ಡ್ ಸೆಟ್ ಮಾಡಿಕೊಳ್ಳಬಹುದು. ಮೂವರ ಪ್ರೊಫೈಲ್‌ಗಳನ್ನು ರಚಿಸಬಹುದು.
- ಸ್ಥಳೀಯ ಆಧಾರ್ ಸೇವಾಕೇಂದ್ರಗಳ ಬಗ್ಗೆ ಮಾಹಿತಿಯನ್ನೂ ಪಡೆಯಬಹುದು. ■







### ನೋಂದಾಯಿಸುವುದು ಹೇಗೆ?

- ಗೂಗಲ್ ಪ್ಲೇಸ್ಟೋರ್‌ನಿಂದ ಎಂಆಧಾರ್ (mAadhaar) ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಿ. ಅಪ್ಲಿಕೇಷನ್ ತೆರೆದು 'ರಿಜಿಸ್ಟರ್ ಆಧಾರ್' ಆಯ್ಕೆ ಕ್ಲಿಕ್ಕಿಸಿ.
- ಪ್ರೊಫೈಲ್ ಪ್ರವೇಶಿಸಲು ನಾಲ್ಕು ಅಂಕಿಯ ಪಿನ್ ಅಥವಾ ಪಾಸ್‌ವರ್ಡ್ ಸೆಟ್ ಮಾಡಿ.
- ಇದಕ್ಕಾಗಿ ಆಧಾರ್ ಸಂಖ್ಯೆಯ ವಿವರಗಳನ್ನು ನಮೂದಿಸಬೇಕು. ನಂತರ, ಕ್ಯಾಪ್ಚಾ ಕೋಡ್ ನಮೂದಿಸಿದರೆ, ಒಟಿಪಿ ನೋಂದಾಯಿತ ಸಂಖ್ಯೆಗೆ ಹೋಗುತ್ತದೆ.
- ಮೊಬೈಲ್‌ಗೆ ಒಟಿಪಿ ಬಂದ ತಕ್ಷಣ, ಅದು ತಾನಾಗಿಯೇ ತುಂಬುತ್ತದೆ. ನೋಂದಣಿ ಪೂರ್ಣಗೊಂಡ ತಕ್ಷಣ, ಆಯಾ ಬಳಕೆದಾರರ ವಿವರಗಳನ್ನು ಡಿಸ್‌ಪ್ಲೇ ಮೇಲೆ ಪ್ರದರ್ಶಿಸಲಾಗುತ್ತದೆ.
- ಮೆನುವಿನಲ್ಲಿ ಕೆಳಗೆ ಕಾಣಿಸುವ 'ಮೈ ಆಧಾರ್' ಟ್ಯಾಬ್ ಮೇಲೆ ಕ್ಲಿಕ್ ಮಾಡಿ ಮತ್ತು ಪಿನ್ ಅಥವಾ ಪಾಸ್‌ವರ್ಡ್ ನಮೂದಿಸಿ. ಡ್ಯಾಶ್‌ಬೋರ್ಡ್ ತೆರೆಯುತ್ತದೆ. ಇದರಲ್ಲಿ ನಿಮಗೆ ಅಗತ್ಯವಿರುವ ಸೇವೆಗಳನ್ನು ನೀವು ಬಳಸಬಹುದು.

## ವಾಟ್ಸ್‌ಆ್ಯಪ್ ಉಚಿತ ಸ್ಟೋರೇಜ್ ಸ್ಥಗಿತ!

ಚಾಟ್, ಫೋಟೊ ಹಾಗೂ ವಿಡಿಯೊಗಳ ಸ್ಟೋರೇಜ್‌ಗಾಗಿ ವಾಟ್ಸ್‌ಆ್ಯಪ್ ಗೂಗಲ್ ಡ್ರೈವ್ ಮೇಲೆ ಅವಲಂಬಿತವಾಗಿದೆ. ಅದೂ ಉಚಿತವಾಗಿ. ಆದರೆ ಭವಿಷ್ಯದಲ್ಲಿ ಈ ಸೇವೆ ಉಚಿತವಾಗಿ ಲಭ್ಯವಾಗುವುದಿಲ್ಲ.

ಗೂಗಲ್ ಡ್ರೈವ್‌ನಲ್ಲಿ ವಾಟ್ಸ್‌ಆ್ಯಪ್ ಸಂದೇಶಗಳು, ಚಿತ್ರಗಳು, ವಿಡಿಯೊಗಳನ್ನು ಬ್ಯಾಕಪ್ ಆಯ್ಕೆಯಡಿ ಆ್ಯಂಡ್ರಾಯ್ಡ್ ಮೊಬೈಲ್ ಬಳಕೆದಾರರು ಉಚಿತವಾಗಿ ಸಂಗ್ರಹಿಸಿಟ್ಟುಕೊಳ್ಳಲು ಪ್ರಸ್ತುತ ಅವಕಾಶವಿದೆ. 2024ರಲ್ಲಿ ಈ ಸವಲತ್ತು ರದ್ದಾಗಲಿದೆ. ಗೂಗಲ್‌ಗೆ ಹಣ ನೀಡಿ ಗೂಗಲ್ ಡ್ರೈವ್‌ನಲ್ಲಿ ಸ್ಥಳ ಖರೀದಿಸಬೇಕಾಗುತ್ತದೆ.

ವಾಟ್ಸ್‌ಆ್ಯಪ್ ಸಂದೇಶಗಳು, ಚಿತ್ರಗಳು, ವಿಡಿಯೊಗಳನ್ನು ಬ್ಯಾಕಪ್ ಆಯ್ಕೆಯಡಿ ಸಹಜವಾಗಿ ಗೂಗಲ್ ಡ್ರೈವ್‌ನಲ್ಲಿ ಉಳಿಸಿಕೊಳ್ಳಬಹುದಿತ್ತು. ಈ ಬಗ್ಗೆ ವಾಟ್ಸ್‌ಆ್ಯಪ್ ಸಹ ಒಂದು ತಿಂಗಳ ಮುಂಚಿತವಾಗಿಯೇ ಸಂದೇಶ ಕಳುಹಿಸಲಿದೆ. ■